ಟಿ.ಎಂ. ಮಾನಪ್ಪ, ಶಿವಮೊಗ್ಗ

◆ ಗಂಡಸರಿಗೆ ಸೆಕೆ ಜಾಸ್ತಿಯಾದರೆ ಬಟ್ಟೆ ಬಿಚ್ಚಿ ಬರಿ ಮೈಯಲ್ಲಿ ಇರುತ್ತಾರೆ. ಹೆಂಗಸರಿಗೆ ಸೆಕೆ ಆದರೆ?



ಈ ಪ್ರಶ್ನೆಯನ್ನು ನಿಜಕ್ಕೂ 'ಮಾನ'ಪ್ಪನವರೇ ಕೇಳಿದುದೆ?

ಬಿ. ಚಂದ್ರೇಗೌಡ, ಬೆಂಗಳೂರು

◆ ಸಂಸಾರಕ್ಕೂ, ಸಂಗೀತಕ್ಕೂ ಏನಾದರೂ ಸಂಬಂಧವಿದೆಯೆ?

ಇದೆಯಲ್ಲ! ಸರಿ ಗಮ ಪದ ಎಂದರೆ 'ಸರಿಯಾಗಿ ಚಲಿಸಿದರೆ ಸುಸ್ಥಾನ' ಎಂಬ ಜೀವನದ ಅರ್ಥ.

ಫಾಲನೇತ್ರ ಸಜ್ಜನ, ಶಿರಸಿ

◆ ದೇಹದಲ್ಲಿ ಆಕರ್ಷಕವಾದ ಭಾಗ ಮುಖ. ಅತ್ಯಾಕರ್ಷಕವಾದ ಭಾಗ?

ಅದೇ ಮೊಗದಲ್ಲಿ ಹರಡುವ ಮುಗುಳ್ನಗೆ.

ಕುಮಾರ ಚಲವಾದಿ, ಹಾಸನ

◆ ಮೋಡಗಳಿಗೆ ತಂಪು ತಗಲಿ ಮಳೆ ಬರುವುದಕ್ಕೂ, ಕತ್ತೆಗಳ ಮದುವೆಗೂ ಏನು ಸಂಬಂಧ?



ಕತ್ತೆಗಳು ಲಗ್ನವಾದ ಸಂತಸದಲ್ಲಿ ಅರಚಿದ್ದರಿಂದಾದ ಕಂಪನದಿಂದ ಮೋಡ ಅದುರಿ ಮಳೆ ಬರಲೆಂಬ ಆಶಯ!

ರತ್ನಾ ಅಶೋಕ ಗೊರವರ, ಧಾರವಾಡ

◆ ವೃಕ್ಷ ಮೊದಲಾ? ಬೀಜ ಮೊದಲಾ?

ನಾವು ಹುರಿದು ಮುಕ್ಕುವುದಕ್ಕಾದರೆ ಬೀಜ ಮೊದಲು. ಅರಣ್ಯಸಚಿವ ಮುರಿದು ಮುಕ್ಕುವುದಕ್ಕಾದರೆ ವೃಕ್ಷ ಮೊದಲು.

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು

◆ ಗಂಡ ಹೆಂಡತಿ ಒಬ್ಬರ ಮೊಬೈಲ್ ಇನ್ನೊಬ್ಬರು ಬಳಸಬಹುದೆ?

ಓ! ದಂಪತಿಗಳು ಪರಸ್ಪರ ಬಳಸಬಾರದುದು ಹಲ್ಲೆಟ್ ಒಂದೇ.

ನಾಗರತ್ನ ಎಂ.ಜಿ. ಬೆಂಗಳೂರು

◆ ಒಲೆಯಲ್ಲಿ ಉರಿಯುವ ಬೆಂಕಿಗೂ, ಒಡಲಲ್ಲಿ ಉರಿಯುವ ಬೆಂಕಿಗೂ ವ್ಯತ್ಯಾಸವೇನು?

ಒಂದು ಅಡಿಗೆ ಬೇಯಿಸುತ್ತದೆ; ಇನ್ನೊಂದು ಅಡಿಗಡಿಗೆ ಬೇಯಿಸುತ್ತದೆ.

ಎಸ್.ಎನ್. ಮಹಾಬಲರಾವ್, ಎನ್ನಾರ್ ಪುರ

◆ ಭಕ್ತನೊಬ್ಬ ಲಿಂಗಕ್ಕೆ ನಮಸ್ಕರಿಸಿ ಮುತ್ತನಿಟ್ಟನಲ್ಲಾ....?

ಗುಡ್. ಭೀತಿಭರಿತ ಭಕ್ತಿಗಿಂತ ಪ್ರೀತಿಭರಿತ ಭಕ್ತಿಯೇ ಲೇಸು.

ವಿ. ಹೇಮಂತಕುಮಾರ್, ಬೆಂಗಳೂರು

◆ ಕಾಗೆ ಗಂಗಾಸ್ನಾನ ಮಾಡಿದರೆ ಕೋಗಿಲೆ ಆಗುವುದೇ ರಾಮ್‌ಜೀ?

ಊಹೂಂ. ಆದರೆ ಕೋಗಿಲೆ ಆ ಕಲುಷಿತ ನೀರನ್ನು ಕುಡಿದರೆ ಕಾಗೆಯ ಸ್ವರ ಹೊರಟೀತು.

ಪಿ.ಜೆ. ರಾಘವೇಂದ್ರ, ಮೈಸೂರು

◆ 'ರಾಜಕೀಯ ಸನ್ಯಾಸ ಸ್ವೀಕರಿಸುತ್ತೇನೆ' ಎನ್ನುವುದು ಆಶ್ವಾಸನೆಯೋ, ಭರವಸೆಯೋ?

ಅದು ಕಂಗ್ಲಿಷ್ ಪದ; ಸನ್ ಮಗ(ನ) ನ್ಯಾಸ ಪ್ರತಿಷ್ಠಾಪನೆಯನ್ನು ಸ್ವೀಕರಿಸುತ್ತೇನೆಂದು ಅರ್ಥ.

ನಾ.ಕು. ಗಣೇಶ, ಬೆಂಗಳೂರು

◆ ಹಿಂಬದಿ, ಮುಂಬದಿಗಳಲ್ಲಿ ಪ್ರತ್ಯೇಕ ಮಾರ್ಗಸಂಖ್ಯೆಯ ಫಲಕಗಳಿರುವ ಬಸ್ ಹೋದೀತೆಲ್ಲಿಗೆ?

ಅಕಟಕಟಾ! ಅದು ಸಮ್ಮಿಶ್ರದ ಬಸ್. ರೆಸಾರ್ಟಿಗೆ ಕೊಂಡೊಯ್ಯಾತು ಎಚ್ಚರ!

ವಿದ್ಯಾ ಎನ್. ಪೈ, ಕಾಸರಕೋಡ

◆ ಮಳೆಯೂ ಸಿನಿಮಾದ ಒಂದು ಭಾಗ. ಏಕೆ?

ಸಿನಿಮಾವನ್ನು ಜ್ಞಾಪಿಸಿಕೊಳ್ಳಲು ಅದೇ ಮುಖ್ಯವಾದ್ದರಿಂದ. ಜನ ನೆನೆದವರನ್ನು ನೆನೆಯುತ್ತಾರೆ.

ವೀಣಾ ಜೋಶಿ, ಬಾರ್ಕೂರು

◆ ಹತ್ತನೆಯ ತರಗತಿಯ ಮಕ್ಕಳು ಓದದೇ ಪಾಸಾಗುವ ದಾರಿಯೊಂದನ್ನು ಸಚಿವರು ಸೂಚಿಸುತ್ತಿದ್ದಾರಲ್ಲಾ...?

ಸ್ವಾನುಭವವನ್ನು ಹಂಚಿಕೊಳ್ಳುತ್ತಿದ್ದಾರಷ್ಟೆ.

## ಬಹುಮಾನಿತ ಪ್ರಶ್ನೆ

◆ ಕೆ.ಹೆಚ್. ರಾಮಕೃಷ್ಣಾರೆಡ್ಡಿ, ಬೆಂಗಳೂರು

ಮರಗಳು ಏಕೆ ನಿಂತುಕೊಂಡೇ ನೀರು ಕುಡಿಯುತ್ತವೆ?

ನಿಂತೇ ಇರಬೇಕಲ್ಲ! ಗೋಡೆಗೆ ಒರಗಲೋ, ನೆಲದಲ್ಲಿ ಮಲಗಲೋ ಹೋದರೆ ಕೊಚ್ಚಿಹಾಕಿಬಿಡುತ್ತಾರೆ.

ರಮೇಶ್, ಹನುಮನಾಳು

◆ ಸೊಸೆಯನ್ನು ಮನೆ ತುಂಬಿಸಿಕೊಳ್ಳಲು ಓಡಾಡುವಾಗ ಇರುವ ಸಂಭ್ರಮ ಅವಳು ಬಂದಮೇಲೆ ಇರುವುದಿಲ್ಲ. ಏಕೆ?

ಸಿಂಹಿಣಿಯೇ ಹಾಗೆ; ಹಿಡಿಯುವವರೆಗೆ ಸಂಭ್ರಮ. ಬೋನಿಗೆ ಬಿದ್ದಮೇಲೆ ಬಳಿ ಸಾರಲು ಅಂಜಿಕೆ, ಆತಂಕ.

ಶಿವಮೊಗ್ಗ ರಮೇಶ, ಮೈಸೂರು

◆ ಪ್ರಬುದ್ಧ ಮತದಾರ ಯಾರು? ಕುಟುಂಬ ರಾಜಕಾರಣ ಎಂದರೇನು? ಉತ್ತರಿಸದಿದ್ದರೆ ಮಸ್ತಕ ಸಾವಿರ ಹೋಳಾದೀತು.



ಪಿಕ್‌ನಿಕ್ ಹೋಗದೆ ವೋಟೊತ್ತವನೇ ಪ್ರಬುದ್ಧ. ರಾಜ್ಯವನ್ನೇ ಕುಟ್ಟಿ ಕುಟ್ಟಿ ಉಂಬ ವಂಶದ ರಾಜಕಾರಣವೇ ಕುಟುಂಬ ರಾಜಕಾರಣ.

ವಿ. ಹಮೀದ್, ವಿಟ್ಲ

◆ ಪಾಪಿ ಯಾವ ನದಿಯಲ್ಲಿ ಸ್ನಾನ ಮಾಡಿದರೆ ಪುಣ್ಯವಂತನಾಗುತ್ತಾನೆ?

ಅರಿವಿನ ನದಿಯಲ್ಲಿ; ಸ್ನಾನವಲ್ಲ, ಧ್ಯಾನ ಮಾಡಿದರೆ.

ಸೃಜನ ಜೈನ್, ಹೂವಿನಹಡಗಲಿ

◆ ರಾಮ್ ಉತ್ತರ ಎಂದರೆ ಒಂಬೈನೂರು ಅಡಿ ಎತ್ತರದಿಂದ ಧುಮುಧುಮು ಧುಮುಕುವ ಜೋಗ ಜಲಪಾತವೆ ಸಾರ್?

ಈ ಜಲಪಾತದ ಸೊಬಗಿಗೆ ಪ್ರಶ್ನೆಗಳ ಜಲರಾಶಿ ಪ್ರಾಜ್ಞ ದಂಡೆಗಳಿಂದ ಧುಮ್ಮಿಕ್ಕುತ್ತಿರುವುದೇ ಕಾರಣ.

■ ರಾಮ್